


ಹಸುರ ನಡುವೆ
ಮೈದಳೆದ ಕೋಟೆ

# ಚರಿತ್ರೆಯ ಪುಟ ಕುಂಬಳ್‌ಗಢ

**ಅರಾವಳಿ ಬೆಟ್ಟಗಳ ನಡುವೆ ನಿಂತಿರುವ ಕುಂಬಳ್‌ಗಢ, ರಾಜಸ್ಥಾನದ ಇತಿಹಾಸ ಪುಟದಂತೆ ಕಾಣುತ್ತದೆ. ವಿಶ್ವದ ಎರಡನೇ ಉದ್ದದ ಮಹಾಗೋಡೆ ಹೊಂದಿದ ಕೋಟೆಯಾಗಿಯೂ ಗುರುತಿಸಿಕೊಂಡಿದೆ.**

■ ದಿನೇಶ ಪಟವರ್ಧನ್

ಐತಿಹಾಸಿಕ ಅರಮನೆಗಳಿಗೆ ಹೆಸರಾಗಿರುವ ರಾಜಸ್ಥಾನದಲ್ಲಿನ 'ಕುಂಬಳ್‌ಗಢ' ಚಾರಿತ್ರಿಕ ಸಂಗತಿಗಳ ಕಣಜ ಎಂದೇ ಹೇಳಬಹುದು. 15ನೇ ಶತಮಾನದಲ್ಲಿ ಮೋರ್ ಸಾಮ್ರಾಜ್ಯದ ಆಡಳಿತಗಾರ ರಾಣಾಕುಂಭ ನಿರ್ಮಿಸಿದ ಈ ಭವ್ಯ ಕೋಟೆ, ವಿಶ್ವದಲ್ಲೇ ಎರಡನೇ ಉದ್ದದ ಮಹಾಗೋಡೆ ಹೊಂದಿದ ಕೋಟೆ ಎಂಬ ಗರಿಮೆಯನ್ನೂ ಪಡೆದಿದೆ.

ರಾಜಸ್ಥಾನದ ರಾಜಸಮಂದ್ ಜಿಲ್ಲೆಯಲ್ಲಿರುವ ಕುಂಬಳ್‌ಗಢ್, ಅರಾವಳಿ ಬೆಟ್ಟಗಳ ಮಧ್ಯೆ ಮೈತಳೆದು ನಿಂತ ಪರಿ ಆಕರ್ಷಕವಾಗಿದೆ. ಚಿತ್ತೋರ್ ಕೋಟೆಯ ನಂತರದ ಅತಿ ದೊಡ್ಡ ಕೋಟೆ ಎಂದೂ ಇದನ್ನು ಬಣ್ಣಿಸಲಾಗಿದೆ. ಸಮುದ್ರಮಟ್ಟದಿಂದ 1100 ಮೀಟರ್ (3600 ಅಡಿ) ಎತ್ತರದಲ್ಲಿದ್ದು, 36 ಕಿ.ಮೀ. (22 ಮೈಲು) ಉದ್ದದ ಈ ಕೋಟೆ 'ಯುನೆಸ್ಕೊ ವಿಶ್ವ ಪಾರಂಪರಿಕ ಸ್ಥಳ'ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಕೋಟೆಯ ವ್ಯಾಪ್ತಿಯಲ್ಲಿ 360 ದೇವಾಲಯಗಳಿವೆ. ಇದರಲ್ಲಿ ಹೆಚ್ಚಿನವು ಜಿನ ದೇಗುಲಗಳು. ಉದ್ಯಾನವನ, ಬಾವಿ, ಅರಮನೆ, ಫಿರಂಗಿಗಳು ಸುಂದರ ಪ್ರಕೃತಿಯ ನಡುವೆ ಮನೋಹರವಾಗಿ ಕಾಣುತ್ತವೆ. ಪಘುರಾಪೋಲ್‌ಗೆ ಸಮೀಪವಿರುವ ಅರಮನೆ ರಜಪೂತ ವಾಸ್ತುಶಿಲ್ಪದ ಆಕರ್ಷಕ ನೆಲೆ. ಎರಡು ಅಂತಸ್ತಿನ ಕಟ್ಟಡದಲ್ಲಿ ಸುಂದರ ದರ್ಬಾರ್ ಹಾಲ್, ಪುರುಷರಿಗಾಗಿ ಮರ್ದನಾ, ಮಹಿಳೆಯರಿಗಾಗಿ ಜನಾನ ಮಹಾಲ್ ಎಂದು ಎರಡು ಭಾಗಗಳಲ್ಲಿ ವಿಂಗಡಿಸಿ ಕಟ್ಟಲಾಗಿದೆ.



ಈ ಕೋಟೆಗೆ ಮೊದಲು ಮಚ್ಚೇಂದ್ರಪುರ ಎಂಬ ಹೆಸರಿತ್ತು. ಖ್ಯಾತ ವಾಸ್ತುಶಿಲ್ಪಿ ಮಂದನ ಸಹಾಯದಿಂದ ರಜಪೂತ ರಾಜವಂಶದ ಸಿಸೋಡಿಯಾ ಕುಲದ ರಾಜ ರಾಣಾಕುಂಭ ಕೋಟೆ ನಿರ್ಮಿಸಿದ್ದ. ಮೇವಾರ ಮತ್ತು ಮಾರವಾರ ಪ್ರದೇಶಗಳನ್ನು ಬೇರ್ಪಡಿಸುವ ಈ ಕೋಟೆ ಶತ್ರುಗಳ ದಾಳಿ ಸಂದರ್ಭ ಮೇವಾರ ಆಡಳಿತಗಾರರಿಗೆ ಆಶ್ರಯತಾಣವಾಗಿತ್ತು. ಕೋಟೆಯ ಕಾವಲುಗೋಪುರ ಬಲಿಷ್ಠವಾಗಿದ್ದು, ಮುಂಭಾಗದ ಗೋಡೆಗಳು 15 ಅಡಿಯಷ್ಟು ದಪ್ಪ, 7 ಎತ್ತರದ ದ್ವಾರಗಳಿವೆ.

ಕೋಟೆ ಒಳಭಾಗದಲ್ಲಿ, ಬೆಟ್ಟದ ಮೇಲೆ ಕುಂಭನ್ ಅರಮನೆ ಹಾಗೂ ರಾಣಾ ಫತೇಸಿಂಗ್ ಕಟ್ಟಿಸಿರುವ ಅರಮನೆಗಳಿವೆ. ಕೋಟೆಯ ಮೇಲ್ಭಾಗದಲ್ಲಿರುವ ಬಾದಲ್ ಮಹಲ್ ಆಕರ್ಷಕ ಕಟ್ಟಡ.

ರಾಜಸ್ಥಾನದ ರಾಜ ಮತ್ತು ಯೋಧ ಮಹಾರಾಣಾ ಪ್ರತಾಪನ ಜನ್ಮಸ್ಥಳವೂ ಇದಾಗಿದೆ. ಚಿತ್ತೋರ್‌ಗಢದಲ್ಲಿ ನಡೆದ ಆಕ್ರಮಣದಿಂದ ತಪ್ಪಿಸಿಕೊಂಡು ಬಂದ ಬಾಲಕ ಉದಯಸಿಂಗ್ ತನ್ನ ಬಾಲ್ಯವನ್ನು ಇಲ್ಲೇ ಕಳೆದು ರಾಜಕೀಯ ಬದುಕನ್ನು ಮುಂದುವರಿಸಿದ ಸ್ಥಳ ಕೂಡ ಹೌದು.

ಕೋಟೆಯಲ್ಲಿನ ದೇವಾಲಯಗಳಲ್ಲಿ, 5 ಅಡಿ ಎತ್ತರದ ಶಿವಲಿಂಗ ಹೊಂದಿದ ನೀಲಕಂಠ ಮಂದಿರ ವಿಶೇಷ ಮನ್ನಣೆ ಪಡೆದಿದೆ. ಚಿನ್ನವನ್ನು ಪರೀಕ್ಷಿಸಲು ಬಳಸುವ ಕಸೋಟಿ ಕಲ್ಲಿನಿಂದ ಈ ಶಿವಲಿಂಗ ನಿರ್ಮಿಸಿರುವುದು ವಿಶೇಷತೆ.

## ಕೋಟೆಯ ಹಿಂದಿನ ಕಥೆ

ಕೋಟೆಯ ಒಳಗೆ 'ದುರ್ಗಾ ಸಾಮ್ರಾಟ್' ಎನ್ನುವ ಆಕರ್ಷಕ ಕೋಟೆ ಇದ್ದು, ಇದರ ಹಿಂದಿನ ಕಥೆ ಸ್ವಾರಸ್ಯಕರವಾಗಿದೆ. ಕೋಟೆ ನಿರ್ಮಾಣ ಹಂತದಲ್ಲಿ ರಾಣಾಕುಂಭನಿಗೆ ಹಲವು ಅಡಚಣೆಗಳು ಎದುರಾಗುತ್ತಿದ್ದವು. ಸಂತರನ್ನು ಭೇಟಿಯಾಗಿ ಪರಿಹಾರ ಕಂಡುಕೊಳ್ಳಲು ಯತ್ನಿಸಿದಾಗ, 'ಯಾರಾದರೂ ಮನುಷ್ಯರು ಸ್ವ ಪ್ರೇರಣೆಯಿಂದ ತಮ್ಮನ್ನು ತಾವು ಬಲಿಕೊಟ್ಟರೆ ಕೋಟೆ ಪೂರ್ಣವಾಗುತ್ತದೆ' ಎಂಬ ಸಲಹೆ ಬಂತು. ಇದರಿಂದ ರಾಜ ಚಿಂತಾಕ್ರಾಂತನಾಗಿದ್ದ. ಆನಂತರ, ಸಲಹೆ ನೀಡಿದ್ದ ಸಂತನೇ ತನ್ನನ್ನು ಅರ್ಪಿಸಿಕೊಂಡ ಎನ್ನುವ ಕಥೆ ಈ ಕೋಟೆ ಹಿಂದಿದೆ.

ಕಡುಬೇಸಿಗೆಯ ದಿನಗಳಲ್ಲೂ ತಣ್ಣನೆ ವಾತಾವರಣ ಇಲ್ಲಿಯದು. ಕೋಟೆಯ ತುತ್ತ ತುದಿಯಲ್ಲಿ ನಿಂತು ನಾಲ್ಕೂ ದಿಕ್ಕುಗಳತ್ತ ಕಣ್ಣು ಹಾಯಿಸಿದರೆ ಕೋಟೆಯ ಗೋಡೆ ಹರಡಿಕೊಂಡ ರೀತಿ, ಭವ್ಯ ದೇಗುಲಗಳು, ಹಸುರು ಕಣಿವೆಯ ವಿಹಂಗಮ ನೋಟ ಮನಸ್ಸಿಗೆ ಮುದ ನೀಡುತ್ತದೆ.

ಬೆಂಗಳೂರಿನಿಂದ ಫಾಲ್ನಾಗೆ ನೇರ ರೈಲು ಸಂಪರ್ಕವಿದೆ. ಫಾಲ್ನಾದಿಂದ ಮೊದೋರಾದ ಸೂರ್ಯ ದೇಗುಲ, ಪಾಠಾಣದ ವಿಶ್ವ ಪಾರಂಪರಿಕ ತಾಣ ಯಾಣಿಕೀ ವಾಹಾ, ಆಗ್ರಾ, ಉದಯಪುರ ಒಳಗೊಂಡು ಅನೇಕ ತಾಣಗಳಿಗೂ ಭೇಟಿ ನೀಡಬಹುದು. ■